ESTD : No. JRB/Cell.II/69/Regn-4876/77-78
Date : 09-12-1977

✆:080-26601442

# ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ

# THE BANGALORE CITY DIST. CO-OPERATIVE UNION LTD.,

' ಸಹಕಾರ ಭವನ ' ನಂ. 1/3, 3ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018
E-mail: bcdcu1977@gmail.com

**ಜೆ. ಮಂಜುನಾಥ್** ಅಧ್ಯಕ್ಷರು | **ಕೃಷ್ಣಪ್ಪ ಕೆ.ಸಿ.** ಉಪಾಧ್ಯಕ್ಷರು | **ಗೌತಮ್ ಹೆಚ್.ಎನ್.** ಖಜಾಂಚಿ

---

ದಿನಾಂಕ: –03–2025

ಗೆ,
ಸಂಪಾದಕರು,
ಸಹಕಾರ ವಾರಪತ್ರಿಕೆ
ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ.,
ಬೆಂಗಳೂರು.

ಮಾನ್ಯರೇ,

ವಿಷಯ : 26–03–2025ರಂದು ಏರ್ಪಡಿಸಿದ ರಾಜ್ಯ ಮಟ್ಟದ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವ ಬಗ್ಗೆ
****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂದಿಸಿದಂತೆ ದಿನಾಂಕ 26–03–2025 ರಂದು ಬೆಂಗಳೂರು ನಗರ ಜಿಲ್ಲೆಯ ಮಹಿಳಾ ಸಹಕಾರಿಗಳಿಗೆ ಏರ್ಪಡಿಸಿದ ರಾಜ್ಯ ಮಟ್ಟದ ಕಾರ್ಯಕ್ರಮದ ಪೋಟೊ ಮತ್ತು ವರದಿಯನ್ನು ತಯಾರಿಸಿ ಈ ಪತ್ರದೊಂದಿಗೆ ಲಗತ್ತಿಸಿದ್ದು ಕಾರಣ ಸದರಿ ವರದಿಯನ್ನು ತಮ್ಮ ಸಹಕಾರ ವಾರಪತ್ರಿಕೆಯಲ್ಲಿ ಪ್ರಕಟಪಡಿಸಬೇಕೆಂದು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ
ಸಹಿ/–
ಮುಖ್ಯಕಾರ್ಯನಿರ್ವಹಣಾಧಿಕಾರಿ

ESTD : No. JRB/Cell.II/69/Regn-4876/77-78
Date : 09-12-1977

✆:080-26601442

ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ
THE BANGALORE CITY DIST. CO-OPERATIVE UNION LTD.,
' ಸಹಕಾರ ಭವನ ' ನಂ. 1/3, 3ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018
E-mail: bcdcu1977@gmail.com

**ಜೆ. ಮಂಜುನಾಥ್** ಅಧ್ಯಕ್ಷರು | **ಕೃಷ್ಣಪ್ಪ ಕೆ.ಸಿ.** ಉಪಾಧ್ಯಕ್ಷರು | **ಗೌತಮ್ ಹೆಚ್.ಎನ್.** ಖಜಾಂಚಿ

**ಪ್ರಕಟಣೆಗಾಗಿ**

## ಬೆಂಗಳೂರು ನಗರ ಜಿಲ್ಲೆಯ ಮಹಿಳಾ ಸಹಕಾರಿಗಳಿಗೆ ಒಂದು ದಿನದ ರಾಜ್ಯ ಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮ

**ದಿನಾಂಕ: 26-03- 2025**

**ಸ್ಥಳ: ಬನ್ನೇರುಘಟ್ಟ ನೇಚರ್ ಕ್ಯಾಂಪ್, ಜಂಗಲ್ ಲಾಡ್ಜ್ ಮತ್ತು ರೆಸಾರ್ಟ್ಸ್, ಖನಿಜ ಭವನ, ಬೆಂಗಳೂರು**

**ಬನ್ನೇರುಘಟ್ಟ :** ಆಧುನಿಕ ತಂತ್ರಜ್ಞಾನ ಬೆಳವಣಿಗೆಯಾದಂತೆ ಅದರ ಉಪಯೋಗದ ಜತೆಗೆ ದುರುಪಯೋಗದ ಪ್ರಕರಣಗಳು ಹೆಚ್ಚಾಗುತ್ತಿವೆ. ಆದ್ದರಿಂದ ತಂತ್ರಜ್ಞಾನದ ಬಳಕೆಯ ಸಮಯದಲ್ಲಿ ಮಹಿಳೆಯರು ಜಾಗೂರಕರಾಗಿರಬೇಕು. ವೈಯಕ್ತಿಕ ಮಾಹಿತಿಗಳು ಸೋರಿಕೆಯಾದಂತೆ ಎಚ್ಚರ ವಹಿಸಬೇಕು. ಸಹಕಾರ ಕ್ಷೇತ್ರದಲ್ಲಿಯೂ ಸಹ ಇಂದು ಮಹಿಳೆಯರು ಹಣಕಾಸಿನ ವ್ಯವಹಾರ ನಡೆಸುವಾಗ ತಂತ್ರಜ್ಞಾನ ಬಳಕೆಯ ಸಮಯದಲ್ಲಿ ಅತ್ಯಂತ ಜಾಗೃತೆಯಿಂದ ವ್ಯವಹರಿಸಿ ಎಂದು ಆಗ್ನೇಯ ಸೈಬರ್ ಅಪಾರಾಧ ವಿಭಾಗದ ಎಸಿಪಿ ಗೋವರ್ಧನ್ ಗೋಪಾಲ್ ಅವರು ತಿಳಿಸಿದರು.

ಅವರು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಹಾಗೂ ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಬನ್ನೇರುಘಟ್ಟ ನೇಚರ್ ಕ್ಯಾಂಪ್‌ನಲ್ಲಿ ಬೆಂಗಳೂರು ನಗರ ಜಿಲ್ಲೆಯ ಮಹಿಳಾ ಸಹಕಾರಿಗಳಿಗೆ ಏರ್ಪಡಿಸಿದ್ದ ರಾಜ್ಯ ಪಟ್ಟದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಸ್. ನವೀನ್ ಅವರು ಮಾತನಾಡಿ, ಸಹಕಾರ ವಲಯದಲ್ಲಿ ಮಹಿಳೆಯರು ತೊಡಗಿಸಿಕೊಳ್ಳಲು ಹೆಚ್ಚಿನ ಅವಕಾಶಗಳಿವೆ. ಆದ್ದರಿಂದ, ಸಹಕಾರ ಕ್ಷೇತ್ರಕ್ಕೆ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಮೂಲಕ ಅದರ ಸದುಪಯೋಗ ಪಡೆಯಲು ತಿಳಿಸಿದರು. ಮಹಿಳೆಯರು ಎಲ್ಲಾ ರೀತಿಯಲ್ಲಿಯೂ ಸಹ ಸಬಲರಾಗಬೇಕು. ಸ್ವಸಹಾಯ ಸಂಘಗಳು ಹಾಗೂ ಮಹಿಳಾ ಆಧ್ಯತೆ ನೀಡುತ್ತಿದ್ದು, ಇದರ ಪ್ರಯೋಜನವನ್ನು ಮಹಿಳೆಯರು ಪಡೆಯುವಂತೆ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರಾದ ಜೆ. ಮಂಜುನಾಥ್ ಅವರು ಮಾತನಾಡು, ಮಹಿಳೆಯರು ಇಂದು ಸಹಕಾರ ಕ್ಷೇತ್ರದಲ್ಲಿ ಕ್ರಿಯಾಶೀಲರಾಗುವ ಮೂಲಕ ಈ ಕ್ಷೇತ್ರದಿಂದ ನೀಡುವ ಯೋಜನೆಗಳ ಸದ್ಬಳಕೆ ಮಾಡಿಕೊಳ್ಳಿ ಎಂದು ಸಲಹೆ ನೀಡಿದರು.

.........2

ಸಮಾರಂಭದಲ್ಲಿ ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಖಜಾಂಚಿ ಹೆಚ್.ಎನ್. ಗೌತಮ್ ಹಾಗೂ ನಿರ್ದೇಶಕರುಗಳಾದ ಕೆ.ಎಸ್. ಚಾಮರಾಜ್, ಎಂ. ವೆಂಕಟೇಶ್, ಸಿ. ವೆಂಕಟೇಶ್, ಬಿ.ಸಿ. ಶಿವಲಿಂಗೇಗೌಡ, ಕೆ.ಐ.ಸಿ.ಎಂ ಪ್ರಾಂಶುಪಾಲರಾದ ಶೈಲಾ ಬಿ.ಎ, ಉಪನ್ಯಾಸಕರಾದ ಸುರೇಖಾ ಎಂ. ಜಿಲ್ಲಾ ಸಹಕಾರ ಶಿಕ್ಷಕರುಗಳಾದ ಮಂಜುನಾಥ್ ನಾಗತಾಣ, ಲಕ್ಷ್ಮೀ ಸಿ.ಎಂ, ಹಾಗೂ ಮಹಿಳಾ ಸಹಕಾರಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದ ಸಂಚಾಲಕರು ಹಾಗೂ ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರಾದ ಫಾತಿಮಾ ಲಾರೆನ್ಸ್ ಅವರು ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯಕಾರ್ಯನಿರ್ವಹಣಾದಿಕಾರಿ ಸವಿತಾ ಎಸ್. ಬಿಸನಾಳ ಅವರು ಕಾರ್ಯಕ್ರಮ ನಿರೂಪಿಸಿ, ಸ್ವಾಗತಿಸಿದರು.

ನಂತರ ಸಂಪನ್ಮೂಲ ವ್ಯಕ್ತಿಗಳಾದ ಆಗ್ನೇಯ ಸೈಬರ್ ಅಪಾರಾಧ ವಿಭಾಗದ ಪೋಲಿಸ್ ಇನ್ಸ್‌ಪೆಕ್ಟರ್ ಈಶ್ವರಿ ಪಿ.ಎಸ್ ಅವರು ಸೈಬರ್ ಅಪರಾಧಗಳು ಹಾಗೂ ಅದನ್ನು ತಡೆಗಟ್ಟುವ ಕುರಿತು ಹಾಘೂ ರಾಜ್ಯ ತರಬೇತುದಾರರಾದ ಸ್ವಾರ್ ವೆಂಕಟೇಶ್ ಅವರು "ಒತ್ತಡ ನಿರ್ವಹಣೆ" ಕುರಿತು ಉಪನ್ಯಾಸ ನೀಡಿದರು.

